## ನವಿಲುಗನ್ನಡಿ

- ವೈವಿಧ್ಯಮಯ ಕಥೆ, ಕವನ, ಲೇಖನಗಳಿಂದ ಮನತುಂಬುತ್ತಿರುವ ಮಯೂರದ ಜೂನ್ ಸಂಚಿಕೆ ಸಮೃದ್ಧವಾಗಿತ್ತು.

**ಲತಾ ಹೆಗಡೆ, ಹುಬ್ಬಳ್ಳಿ**

- 'ಶ್ರೇಷ್ಠತೆಯ ವ್ಯಸನ: ವಿಕಾಸವೋ? ಸೊಕ್ಕೋ?' (ಬರಗೂರು ರಾಮಚಂದ್ರಪ್ಪ) ಲೇಖನ ಹಲವು ಪ್ರಶ್ನೆಗಳನ್ನು ಹುಟ್ಟುಹಾಕಿತು. ಸಾಹಿತ್ಯದಲ್ಲಿ ಶ್ರೇಷ್ಠಕನಿಷ್ಠಗಳ ಮಾನದಂಡ ಯಾವುದು? ಶ್ರೇಷ್ಠವಾದದ್ದನ್ನಷ್ಟೇ ಪ್ರಕಟಿಸಬೇಕು ಎಂದರೆ ಪ್ರಕಟಿಸದೇ ಶ್ರೇಷ್ಠವಾಗುವುದಾದರೂ ಹೇಗೆ? ವ್ಯಕ್ತಿ ಮುಖ್ಯವೊ, ಕೃತಿಯೊ? ಅಗ್ಗದ ಸಾಹಿತ್ಯ ಅಂದರೇನು? ಮಹಿಳಾ ಬರಹಗಾರರನ್ನು ಸಾರಾಸಗಟಾಗಿ ನಿರ್ಲಕ್ಷಿಸುವ ನಿಲುವಿನ ಹಿಂದಿರುವ ರಾಜಕೀಯ ಎಂಥದ್ದು? ಇಂತಹ ಹಲವು ಗಹನವಾದ ಪ್ರಶ್ನೆಗಳ ಮೇಲೆ ಲೇಖನ ಬೆಳಕು ಚೆಲ್ಲುವಂತಿದೆ.

**ಶಂಕರನಾರಾಯಣ ಭಟ್, ಹೊನ್ನಾವರ**

- ಬರಗೂರು ರಾಮಚಂದ್ರಪ್ಪ ಲೇಖನದಲ್ಲಿ ಸಂಕೀರ್ಣವಾದ ವಸ್ತುವೊಂದನ್ನ ಅತ್ಯಂತ ಸರಳವಾಗಿ ಹೇಳಿ ನನ್ನಂಥ ಸಾಮಾನ್ಯ ಸಾಹಿತ್ಯ ಓದುಗನ ಗಮನ ಸೆಳೆದಿದ್ದಾರೆ. ಅಗ್ಗದ ಸಾಹಿತ್ಯ ಮತ್ತು ಜನಪ್ರಿಯ ಸಾಹಿತ್ಯದ ವ್ಯತ್ಯಾಸವನ್ನು ಮಾರ್ಮಿಕವಾಗಿ ಹೇಳಿದ್ದಾರೆ.

**ಬಿ. ರಾಮಮೂರ್ತಿ, ಕಾಸರಗೋಡು**

**ಸಂತೆಬೆನ್ನೂರು ಮಂಜಪ್ಪ, ಭದ್ರಾವತಿ**

- ಸಾವಿನ ಕನ್ನಡಿ (ಕರೀಗೌಡ) ಅನುಭವ ಕಥನ ನೆರೆ, ಮೇಘಸ್ಫೋಟ, ಬರ, ಭೂಕಂಪ ಮುಂತಾದ ಪ್ರಕೃತಿ ವಿಕೋಪಗಳಂತಹ ಸಂದರ್ಭಗಳನ್ನು ಭ್ರಷ್ಟರು ಹೇಗೆಲ್ಲ ಉಪಯೋಗಿಸಿಕೊಳ್ಳುತ್ತಾರೆ ಎನ್ನುವುದಕ್ಕೆ ಹಿಡಿದ ಕನ್ನಡಿಯಾಗಿದೆ. ಸನ್ಯಾಸಿಯ ಅಸಹಜ ನಡವಳಿಕೆ, ರೈತನ ಸರಳತೆ ಮನುಷ್ಯನ ವೈರುಧ್ಯಗಳ ನಿದರ್ಶನಗಳಂತಿವೆ.

**ಎಂ.ಜಿ. ರಂಗಸ್ವಾಮಿ, ಹಿರಿಯೂರು**




- ಮಾಧವಿ ಭಂಡಾರಿ ಅವರ 'ತೊಡೆದೇವು' ಕಥೆ ತನ್ನ ತಣ್ಣನೆಯ ನಿರೂಪಣಾ ಶೈಲಿಯಲ್ಲಿ ತಲ್ಲಣ ಹುಟ್ಟಿಸುವ ಸೂಕ್ಷ್ಮತೆಯನ್ನು ಅಡಗಿಸಿಕೊಂಡಿದೆ. ಡಾ.ಪ್ರೇಮಲತ ಬಿ. ಅವರ 'ತೆರವು' ಕಥೆಯಲ್ಲಿ ಗೀತಾಳ ಪಾತ್ರ ಇಷ್ಟವಾಯಿತು.

**ರಾಧಿಕಾ ಜಿಗಜಿಣಕಿ, ವಿಜಯಪುರ**

**ವಿ.ಎಸ್. ಅನುಪಮಾ, ಧಾರವಾಡ**

- 10 ಗಂಟೆ ಬಸ್ ಅರ್ಥಾತ್ ಕಟ್ ಸರ್ವಿಸ್ ಬಸ್ (ನಿಂಗಪ್ಪ ಮುದೇನೂರು) ಪ್ರಬಂಧ ಬಹಳ ಚೆನ್ನಾಗಿ ಮೂಡಿ ಬಂದಿದೆ. ಐವತ್ತು ವರುಷಗಳ ಹಿಂದಿನ ನೆನಪು ಕಣ್ಮುಂದೆ ಬಂದಿತು. ಅಂದಿನ ಸೊಗಸು ಸೊಬಗು ಇಂದಿನ ಅಂಗೈಯಲ್ಲಿನ ಜಗತ್ತು ತಂದು ಕೊಡಲಾರದು. ಬಸ್ಸಿನ ಚಲನಶೀಲತೆಯನ್ನು ಆಧರಿಸಿ ಜನರ ಭವಿಷ್ಯ ಹೇಗೆ ರೂಪಗೊಳ್ಳುತ್ತಿತ್ತು ಎಂಬುದನ್ನು ಪ್ರಬಂಧ ಸೊಗಸಾಗಿ ಚಿತ್ರಿಸಿದೆ.

**ಪ್ರಕಾಶ್ ಮಲ್ಕಿಒಡೆಯರ್, ಹೂವಿನ ಹಡಗಲಿ**

- ಗಣೇಶ್ ಪ್ರಸಾದ್ ಮಂಜೇಶ್ವರ್ ಅವರ ಕಥೆ 'ಚಿಲ್ಲಾ' ಬಹಳ ಚೆನ್ನಾಗಿದೆ. ಸಂಗೀತ ಕಲಿಯದವರಿಗೂ ಸೋಹನಿ, ಪುರಿಯಾ, ಮಾರವಾ ರಾಗಗಳ ಬಗ್ಗೆ ಕುತೂಹಲ ಹೆಚ್ಚಿಸಿ ಆ ರಾಗಗಳ ಬೆನ್ನು ಹತ್ತುವಂತೆ ಮಾಡುತ್ತದೆ.

**ಮಂಜುಳಾ ವೈ, ಬೆಂಗಳೂರು**